ನೀರಿನ ಯೋಜನೆಗಳನ್ನು ಮತ್ತು 3 ಕಿರುನೀರು ಯೋಜನೆಗಳನ್ನು 1996-97ನೇ ಸಾಲಿನಲ್ಲಿ ಮುಗಿಸಬೇಕೆಂದು ಗುರಿ ನಿಗದಿಪಡಿಸಲಾಗಿದೆ.

ವಿಷಯ:- ಧಾರವಾಡ ಜಿಲ್ಲೆಯಲ್ಲಿ ಕೊಳವೆ ಬಾವಿಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 447 (646)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಧಾರವಾಡ ಜಿಲ್ಲೆಯಲ್ಲಿ ಇದುವರೆಗೆ ಕೊರೆದಿರುವ ಕೊಳವೆಬಾವಿಗಳು ಎಷ್ಟು?

2) ಇವುಗಳಲ್ಲಿ ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿರುವ ಕೊಳವೆ ಬಾವಿಗಳು ಎಷ್ಟು?

3) ಹಾಗಿದ್ದಲ್ಲಿ ಕೆಟ್ಟಿರುವ ಕೊಳವೆ ಬಾವಿಗಳನ್ನು ಕೂಡಲೆ ದುರಸ್ತಿಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

1) ಧಾರವಾಡ ಜಿಲ್ಲೆಯಲ್ಲಿ ಇದುವರೆವಿಗೂ ಒಟ್ಟು 9832 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

2) ಅವುಗಳಲ್ಲಿ ಒಟ್ಟು 7871 ಕೊಳವೆ ಬಾವಿಗಳು ತೃಪ್ತಿಕರವಾಗಿ ಕಾರ್ಯ ನಿರ್ವಹಿಸುತ್ತವೆ.

3) ಗ್ರಾಮೀಣ ಪ್ರದೇಶಗಳಲ್ಲಿ ದುರಸ್ತಿಗೆ ಬಂದಿರುವ ಕೊಳವೆ ಬಾವಿಗಳನ್ನು ಮತ್ತು ಕೈಪಂಪುಗಳನ್ನು ದುರಸ್ತಿ ಮಾಡಲು ಪ್ರತ್ಯೇಕವಾಗಿ ನುರಿತ ತಾಂತ್ರಿಕ ಸಿಬ್ಬಂದಿಗಳನ್ನು ಸಂಚಾರಿ ವಾಹನಗಳನ್ನೊದಗಿಸಿ ನೇಮಿಸಲಾಗಿದೆ. ಈ ಸಿಬ್ಬಂದಿಯು ಕೈಪಂಪು ದುರಸ್ತಿ ಕಾರ್ಯವನ್ನು ಕೈಗೊಂಡು ಗ್ರಾಮೀಣ ಜನರಿಗೆ ಕುಡಿಯುವ ನೀರನ್ನು ಪೂರೈಸಲು ಕ್ರಮ ಕೈಗೊಳ್ಳುತ್ತಿದ್ದಾರೆ. ಅಲ್ಲದೆ, ಗ್ರಾಮ ಪಂಚಾಯತಿಯವರೂ ಸಹ ಕೈಪಂಪು ದುರಸ್ತಿ ಕಾರ್ಯ ಕೈಗೊಳ್ಳುವರು.

ವಿಷಯ:- ಧಾರವಾಡ ಜಿಲ್ಲೆಯಲ್ಲಿ ನಿರ್ಮಲ ಯೋಜನೆಯಡಿಯಲ್ಲಿ ಶೌಚಾಲಯಗಳ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 448 (646)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಗ್ರಾಮೀಣಾಭಿವೃದ್ಧಿ

ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. 1994-95ನೇ ಸಾಲಿನಲ್ಲಿ ನಿರ್ಮಲ ಗ್ರಾಮ ಯೋಜನೆಯಡಿ ಧಾರವಾಡ ಜಿಲ್ಲೆಯಲ್ಲಿ ಎಷ್ಟು ಶೌಚಾಲಯಗಳನ್ನು ನಿರ್ಮಿಸಲಾಗಿದೆ?

2. ಇವುಗಳಲ್ಲಿ ಎಷ್ಟು ಪೂರ್ಣಗೊಂಡಿವೆ ಅವುಗಳಿಗೆ ತಗುಲಿದ ವೆಚ್ಚವೆಷ್ಟು, ಹಾಗೂ ಸಾಧಿಸಬೇಕಾದ ಗುರಿ ಎಷ್ಟು? (ತಾಲ್ಲೂಕುವಾರು ವಿವರಗಳನ್ನು ನೀಡುವುದು).

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

1. 1994-95ನೇ ಸಾಲಿನಲ್ಲಿ ನಿರ್ಮಲ ಗ್ರಾಮ ಯೋಜನೆಯು ಜಾರಿಯಲ್ಲಿರಲಿಲ್ಲ. ಆದರೆ 1994-95ನೇ ಸಾಲಿನಲ್ಲಿ ಒಟ್ಟು 3594 ವೈಯಕ್ತಿಕ ಶೌಚಾಲಯಗಳನ್ನು ಗ್ರಾಮೀಣ ನೈರ್ಮಲ್ಯ ಯೋಜನೆಯಡಿಯಲ್ಲಿ ನಿರ್ಮಿಸಲಾಗಿದೆ.

2. ಪೂರ್ಣಗೊಂಡ ಶೌಚಾಲಯಗಳ ಸಂಖ್ಯೆ : 3664

ಅವುಗಳಿಗೆ ತಗುಲಿದ ವೆಚ್ಚ ರೂ : 82.71 ಲಕ್ಷ

ಜಿಲ್ಲಾ ಪಂಚಾಯತ್‌ನಿಂದ ನಿಗಧಿಪಡಿಸಿದ ಗುರಿ : 2656

(ತಾಲ್ಲೂಕುವಾರು ಮಾಹಿತಿಯನ್ನು ಲಗತ್ತಿಸಿದೆ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 646ರ ಲಗತ್ತು:

ಗ್ರಾಮೀಣ ನೈರ್ಮಲ್ಯ ಯೋಜನೆಯಡಿ ವೈಯಕ್ತಿಕ ಶೌಚಾಲಯಗಳ ನಿರ್ಮಾಣ ಯೋಜನೆ ಅಡಿಯಲ್ಲಿ 1994-95ರ ಸಾಲಿನ ಪ್ರಗತಿ.

ಕ್ರಮ	ತಾಲ್ಲೂಕು	ಗುರಿ		ಮಾರ್ಚ್ 95 ತಿಂಗಳ ಅಂತ್ಯದವರೆಗಿನ ಸಾಧನೆ	
ಸಂಖ್ಯೆ		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ (ರೂ.ಲಕ್ಷಗಳಲ್ಲಿ)
1	ಧಾರವಾಡ	145	3.864	334	7,18,660
2.	ಹುಬ್ಬಳ್ಳಿ	91	1.579	242	4,46,700
3.	ಕಲಘಟಗಿ	221	5.595	252	5,95,040
4.	ನವಲಗುಂದ	88	2.329	234	3,50,400
5.	ಗದಗ	101	2.803	59	1,41,600
6.	ರೋಣ	117	4.118	240	4,60,440

7.	ನರಗುಂದ	59	1.54	386	6,83.880
8.	ಮುಂಡರಗಿ	68	1.785	15	40,800
9.	ಸವಣೂರು	125	3.208	26	6,40,300
10.	ಶಿಗ್ಗಾಂವ	181	4.603	185	4,62,000
11.	ಕುಂದಗೋಳ	101	2.651	212	5,13,600
12.	ಹಾನಗಲ್	259	6.628	497	10,55,200
13.	ಶಿರಹಟ್ಟಿ	91	5.143	184	48,320
14.	ಹಾವೇರಿ	234	5.948	121	3,43,000
15.	ಬ್ಯಾಡಗಿ	85	3.248	86	2,17,600
16.	ರಾಣಿಬೆನ್ನೂರ	187	4.83	186	4,46,400
17.	ಹಿರೇಕೆರೂರ	503	12.465	405	7,07,520
	ಒಟ್ಟು	2656	72.337	3664	82,71,460

ವಿಷಯ:- ಧಾರವಾಡ ಜಿಲ್ಲೆಯಲ್ಲಿ ಬೋಧಕ ಸಿಬ್ಬಂದಿ ಕೊರತೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 449 (644)

ಶ್ರೀ ಜವದೀಶ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿರುವ ಪದವಿಪೂರ್ವ ಶಿಕ್ಷಣ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಅವುಗಳಲ್ಲಿ ಒಟ್ಟು ಅನುದಾನಿತ ಮತ್ತು ಸರ್ಕಾರಿ ಕಾಲೇಜುಗಳ ಸಂಖ್ಯೆ ಎಷ್ಟು?

ಇ) ಜಿಲ್ಲೆಯಲ್ಲಿನ ಎಲ್ಲ ಅನುದಾನಿತ ಹಾಗೂ ಸರ್ಕಾರಿ ಕಾಲೇಜುಗಳಲ್ಲಿ ಬೋಧಕ ಸಿಬ್ಬಂದಿ ಹಾಗೂ ಇತರ ಸಿಬ್ಬಂದಿ ವರ್ಗವನ್ನು ಸೂಕ್ತ ರೀತಿಯಲ್ಲಿ ತುಂಬಲಾಗಿದೆಯೇ?

ಈ) ಬೋಧಕ ಸಿಬ್ಬಂದಿಗಳು ಇಲ್ಲದೇ ಇರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ತೀರಾ ಅನಾನುಕೂಲತೆಯುಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿರುವುದೇ? ಹಾಗಿದ್ದಲ್ಲಿ ಅದರ ನಿವಾರಣೆಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-